275

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು -03

ಸಂಖ್ಯೆ: ಎಕ್ಸ್1/ಡ್ರಾ.ಗ್ರೇ.ಓ.ಎಂ.ಆರ್/05/2018-19 ದಿನಾಂಕ: 16.08.2018

### ಸುತ್ತೋಲೆ

**ವಿಷಯ:** ಡ್ರಾಯಿಂಗ್ ಗ್ರೇಡ್ ವಿದ್ಯಾರ್ಥಿಗಳ ವಿವರವನ್ನು ಓ.ಎಂ.ಆರ್(OMR) ನಲ್ಲಿ ಭರ್ತಿ ಮಾಡುವ ಬಗ್ಗೆ.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನವೆಂಬರ್-2018ನೇ ಸಾಲಿನಲ್ಲಿ ನಡೆಯುವ ಡ್ರಾಯಿಂಗ್ **ಲೋಯರ್ ಗ್ರೇಡ್ ಮತ್ತು ಹೈಯರ್ ಗ್ರೇಡ್ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಓ.ಎಂ.ಆರ್ ಶೀಟ್ ಕಳುಹಿಸಲಾಗುತ್ತಿದೆ.** ಮಾಹಿತಿ ಪುಸ್ತಕದಲ್ಲಿ ನೀಡಿರುವ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಅದರಂತೆ ಓ.ಎಂ.ಆರ್ ಭರ್ತಿ ಮಾಡಬೇಕು. ಸಂಸ್ಥೆಯ ಮುಖ್ಯಸ್ಥರು ನೀಡಿರುವ ಸಂಖ್ಯೆಗನುಗುಣವಾಗಿ ಡ್ರಾಯಿಂಗ್ ಓ.ಎಂ.ಆರ್ ಶೀಟ್‌ಗಳನ್ನು ನೀಡಲಾಗುವುದು. ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು. **ಒಂದು ವೇಳೆ ಓ.ಎಂ.ಆರ್‌ನಲ್ಲಿ ತಪ್ಪು ಮಾಡಿದರೆ ಮತ್ತೊಂದು ಓ.ಎಂ.ಆರ್ ಗೆ ರೂ.100/-ಗಳನ್ನು ಮಂಡಳಿಯ NEFT CHALLAN (Other exam)ಮೂಲಕ ಪಾವತಿಸಿ ಮೂಲ ಚಲನ್‌ನ್ನು ಮಂಡಳಿಗೆ ಸಲ್ಲಿಸಿದಲ್ಲಿ ಮತ್ತೊಂದು ಓ.ಎಂ.ಆರ್. ನೀಡಲಾಗುವುದು.** ಭರ್ತಿ ಮಾಡಿರುವ ಓ.ಎಂ.ಆರ್ ಗಳನ್ನು ಬಟ್ಟೆ ಲಕೋಟೆ (Clothline Cover) ಯಲ್ಲಿರಿಸಿ ಸಲ್ಲಿಸತಕ್ಕದ್ದು.

ಸಂಸ್ಥೆಯ ಮುಖ್ಯಸ್ಥರು ಮಂಡಳಿಗೆ ಭರ್ತಿ ಮಾಡಿದ ಓ.ಎಂ.ಆರ್ ಶೀಟ್‌ಗಳನ್ನು ಲೋಯರ್ ಮತ್ತು ಹೈಯರ್ ಓ.ಎಂ.ಆರ್.ಗಳನ್ನು ಪ್ರತ್ಯೇಕ ಕವರ್‌ಗಳಲ್ಲಿ ದಿನಾಂಕ: 11.09.2018 ರೊಳಗೆ ಮಂಡಳಿಗೆ ಸಲ್ಲಿಸಲು ತಿಳಿಸಿದೆ. ಓ.ಎಂ.ಆರ್ ಶೀಟ್‌ನಲ್ಲಿ ಯಾವುದಾದರೂ ಮಾಹಿತಿ ತಪ್ಪಾಗಿ ತುಂಬಿದಲ್ಲಿ ಅದಕ್ಕೆ ಸಂಸ್ಥೆಯ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಓ.ಎಂ.ಆರ್ ಶೀಟ್‌ನಲ್ಲಿ ಮಾಹಿತಿ ತಪ್ಪಾಗಿ ನಮೂದಿಸಿ ತಿದ್ದುಪಡಿಗೆ ಮನವಿ ಸಲ್ಲಿಸಿದರೆ ಒಂದು ತಿದ್ದುಪಡಿಗೆ ರೂ.500/-ದಂಡ ವಿಧಿಸಲಾಗುವುದು. ಓ.ಎಂ.ಆರ್.ನಲ್ಲಿ ಫೋಟೋ ಅಂಟಿಸದಿದ್ದಲ್ಲಿ ಅಂತಹ ಓ.ಎಂ.ಆರ್.ಗಳನ್ನು ತಿರಸ್ಕರಿಸಲಾಗುವುದು.

### ಓ.ಎಂ.ಆರ್ (OMR) ಭರ್ತಿ ಮಾಡುವ ಬಗ್ಗೆ ಸಾಮಾನ್ಯ ಸೂಚನೆಗಳು

1) ಓ.ಎಂ.ಆರ್.ನ್ನು ಜೆರಾಕ್ಸ್ ಮಾಡಿ ಮೊದಲು ಅದರಲ್ಲಿ ಭರ್ತಿ ಮಾಡಿ ನಂತರ ಮೂಲ ಓ.ಎಂ.ಆರ್.ಶೀಟ್‌ನಲ್ಲಿ ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು.
2) ಓ.ಎಂ.ಆರ್ ಮೇಲೆ ಯಾವುದೇ ಅನಗತ್ಯ ಗುರುತುಗಳನ್ನು ಮಾಡಬಾರದು.
3) ಓ.ಎಂ.ಆರ್ ಒಮ್ಮೆ ಶೇಡ್ (Shade) ಮಾಡಿದ ನಂತರ ಯಾವುದೇ ಕಾರಣಕ್ಕೂ ಅಳಿಸಿ ಭರ್ತಿ ಮಾಡಬಾರದು ಮತ್ತು ವೈಟ್‌ನರ್‌ನ್ನು ಉಪಯೋಗಿಸಬಾರದು.
4) ಓ.ಎಂ.ಆರ್‌ಗೆ ಗುಂಡು ಸೂಜಿ ಸಿಕ್ಕಿಸುವುದು, ಪಿನ್ ಹಾಕುವುದು, ಟ್ಯಾಗ್ ಮಾಡುವುದು, ಮಡಿಸುವುದು, ಒದ್ದೆ ಮಾಡುವುದು, ಗೀಚುವುದು, ಹರಿಯುವುದಾಗಲಿ ಮಾಡಬಾರದು.
5) ಓ.ಎಂ.ಆರ್. ನಲ್ಲಿನ ಎಲ್ಲಾ ಅಂಕಣಗಳನ್ನು ತಪ್ಪದೇ ಭರ್ತಿ ಮಾಡುವುದು. ಫೋಟೋಗಳು ಉದುರದಂತೆ ಅಂಟಿಸುವುದು,
6) ಅಪೂರ್ಣ ಮಾಹಿತಿ ನೀಡಿದಲ್ಲಿ ಓ.ಎಂ.ಆರ್. ತಿರಸ್ಕರಿಸಲಾಗುವುದು.
7) ಭರ್ತಿ ಮಾಡಿದ ಓ.ಎಂ.ಆರ್ ಶೀಟ್‌ನ್ನು ಛಾಯಾ(Zerox) ಪ್ರತಿ ಮಾಡಿಸಿಕೊಂಡು ತಮ್ಮಲ್ಲೇ ಉಳಿಸಿಕೊಳ್ಳುವುದು.
8) ಓ.ಎಂ.ಆರ್. ಶೀಟ್‌ನ್ನು ಭರ್ತಿ ಮಾಡುವಾಗ ತಪ್ಪಾದಲ್ಲಿ ಹೊಸ ಓ.ಎಂ.ಆರ್ ಪಡೆಯಲು ಒಂದು ಓ.ಎಂ.ಆರ್.ಗೆ ರೂ.100/- ಗಳನ್ನು ಮಂಡಳಿಯ ಇತರೆ ಪರೀಕ್ಷೆಯ NEFT CHALLAN (Other exam )ಮೂಲಕ ಹಣ ಪಾವತಿಸಿ, ಮೂಲ NEFT CHALLAN, ತಪ್ಪಾದ ಓ.ಎಂ.ಆರ್‌ನ್ನು ಮನವಿ ಪತ್ರದ ಜೊತೆ ಲಗತ್ತಿಸಿ ಮಂಡಳಿಗೆ ಕೂಡಲೇ ಕಳುಹಿಸುವುದು.
9) **OMR ಶೀಟುಗಳನ್ನು ಕಡ್ಡಾಯವಾಗಿ ದಿನಾಂಕ: 07.09.2018 ರಂದು ತ್ವರಿತ ಅಂಚೆ (SPEED POST) ಮುಖಾಂತರ ಮಂಡಳಿಗೆ ಕಳುಹಿಸುವುದು. ಕವರ್‌ಗಳ ಮೇಲೆ ಓ.ಎಂ.ಆರ್.ಗಳ ಸಂಖ್ಯೆ ತಪ್ಪದೇ ಬರೆಯುವುದು.**
10) **ದಿನಾಂಕ: 11.09.2018 ರ ನಂತರ ಮಂಡಳಿಗೆ ಬಂದ OMR ಶೀಟುಗಳನ್ನು ಕಡ್ಡಾಯವಾಗಿ ತಿರಸ್ಕರಿಸಲಾಗುವುದು.**


ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು -03**

ನವೆಂಬರ್-2018ರ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯ ವಿದ್ಯಾರ್ಥಿಗಳ ಮಾಹಿತಿಯನ್ನು ಓ.ಎಂ.ಆರ್. ನಮೂನೆಯಲ್ಲಿ ಭರ್ತಿ ಮಾಡಲು ಸೂಚನೆಗಳು.

1) ಅಂಕಣ 1ರಲ್ಲಿ ವಿದ್ಯಾರ್ಥಿಯ ಹೆಸರನ್ನು CAPITAL LETTERS ನಲ್ಲಿ ಶಾಲಾ ದಾಖಲಾತಿ ವಹಿಯಲ್ಲಿದ್ದಂತೆ ಬಾಕ್ಸ್‌ನಲ್ಲಿ ತುಂಬಿ, ಅದಕ್ಕೆ ಸಂಬಂಧಿಸಿದ ಇಂಗ್ಲೀಷ್ ಅಕ್ಷರಗಳನ್ನು ಕೆಳಗಿನ ಬಾಕ್ಸ್‌ನಲ್ಲಿ ಶೇಡ್ (Shade) ಮಾಡಬೇಕು.

ಉದಾಹರಣೆ :- ANIRUDHA J V




ವಿದ್ಯಾರ್ಥಿಯ ಹೆಸರನ್ನು ನಮೂದಿಸುವಾಗ ಹೆಸರಿನ ಮಧ್ಯೆ ಯಾವುದೇ ಅಂಕಣಗಳನ್ನು ಖಾಲಿ ಬಿಡಬಾರದು. ಹೆಸರು, ಸರ್ ನೇಮ್ ಮತ್ತು ಇನಿಷಿಯಲ್‌ಗಳ ಮಧ್ಯೆ ಒಂದು ಬಾಕ್ಸ್ ಖಾಲಿ ಬಿಡಬೇಕು.


2) ಅಂಕಣ 2ರಲ್ಲಿ ಶಾಲಾ ಸಂಕೇತ ಮತ್ತು ವಿಳಾಸವನ್ನು ಮಂಡಳಿಯೇ ಮುದ್ರಿಸಿ ನೀಡಿರುತ್ತದೆ.

3) ಅಂಕಣ 3ರಲ್ಲಿ ವಿದ್ಯಾರ್ಥಿಯ ಜನ್ಮ ದಿನಾಂಕವನ್ನು ತಿಳಿಸಿರುವ ಬಾಕ್ಸ್‌ನಲ್ಲಿ ಬರೆದು ಸಂಬಂಧಿಸಿದ ಅಂಕಿಗಳನ್ನು ಕೆಳಗಿನ ಬಾಕ್ಸ್‌ನಲ್ಲಿ ಶೇಡ್ (Shade) ಮಾಡಬೇಕು. ಶಾಲಾ ದಾಖಲಾತಿಯಲ್ಲಿರುವಂತೆ ನಮೂದಿಸತಕ್ಕದ್ದು.

ಉದಾ:- 21-12-2002

**3. Date of Birth**

| Day | Month | Year |
|---|---|---|
| 21 | 12 | 2002 |



4) ಅಂಕಣ 4ರಲ್ಲಿ ವಿದ್ಯಾರ್ಥಿಯ ಲಿಂಗವನ್ನು ಈ ಕೆಳಗಿನಂತೆ ಶೇಡ್ ಮಾಡುವುದು.

ಗಂಡು (BOY) ಆದಲ್ಲಿ 1 ರಲ್ಲಿ Shade ಮಾಡಬೇಕು

ಹೆಣ್ಣು (GIRL) ಆದಲ್ಲಿ 2 ರಲ್ಲಿ Shade ಮಾಡಬೇಕು

ಉದಾಹರಣೆ : (BOY)

| 4. Gender | |
|---|---|
| 1. Boy | ● |
| 2. Girl | ○ |

5) ಅಂಕಣ 5 ರಲ್ಲಿ ವಿದ್ಯಾರ್ಥಿಯ ಜಾತಿಯನ್ನು ಬಾಕ್ಸ್‌ನಲ್ಲಿ ಸಂಬಂಧಿಸಿದ ಸಂಕೇತದ ಮುಂದೆ ಶೇಡ್ (Shade) ಮಾಡಬೇಕು.

ಉದಾಹರಣೆ :- ವಿದ್ಯಾರ್ಥಿಯು OTHERS ಆದಲ್ಲಿ

| 5. Caste | |
|---|---|
| 1. SC | ○ |
| 2. ST | ○ |
| 3. Others | ● |

6) ವಿದ್ಯಾರ್ಥಿಯು ಕಿವುಡ ಅಥವಾ ಮೂಗನಾಗಿದ್ದಲ್ಲಿ ಅಂಕಣ 6ರಲ್ಲಿ ತುಂಬಬೇಕು.

| 6. Deaf / Dumb | | | |
|---|---|---|---|
| 1. Yes | ○ | 2. No | ● |

7) ಅಂಕಣ 7ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಯಾಗಿದ್ದಲ್ಲಿ ಲೋಯರ್ ಹಾಗೂ ಹೈಯರ್ ಎರಡಕ್ಕೂ ರೂ. 20/– ಶುಲ್ಕಕ್ಕೆ ಶೇಡ್ ಮಾಡುವುದು. ಸಾಮಾನ್ಯ ವಿದ್ಯಾರ್ಥಿಗಳಿಗೆ ಲೋಯರ್ 260–00 ಹಾಗೂ ಹೈಯರ್ 325–00 ಎಂದು ಶೇಡ್ ಮಾಡುವುದು.

| 7. Details of Fees Paid | | | |
|---|---|---|---|
| SC/ST Rs.20 | ○ | Others Rs. 325 | ● |

8) ಅಂಕಣ 8ರಲ್ಲಿ ವಿದ್ಯಾರ್ಥಿಯ ಇತ್ತೀಚಿನ ಕಲರ್ ಭಾವಚಿತ್ರವನ್ನು ಅಂಟಿಸಿ, ಭಾವಚಿತ್ರದ ಮೇಲೆ ಸಂಸ್ಥೆಯ ಪ್ರಾಂಶುಪಾಲರ ಸಹಿ ಮತ್ತು ಮೊಹರನ್ನು ಹಾಕಬೇಕು. ಪಿನ್ ಅಥವಾ ಸ್ಟ್ಯಾಪಲ್ ಮಾಡಬಾರದು.

9) ಅಂಕಣ 9ರಲ್ಲಿ ಸಂಸ್ಥೆಯ ಸ್ಥಿರ ದೂರವಾಣಿ ಹಾಗೂ ಡ್ರಾಯಿಂಗ್ ಶಿಕ್ಷಕರ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು.

**9. Institution Telephone No.**

| | | | | | | | | | |
|---|---|---|---|---|---|---|---|---|---|
| | | | | | | | | | |

**Drawing Teacher's Mobile No.**

| | | | | | | | | | |
|---|---|---|---|---|---|---|---|---|---|
| | | | | | | | | | |

10) ಅಂಕಣ 10 ರಲ್ಲಿ ವಿದ್ಯಾರ್ಥಿಯ ಇತ್ತೀಚಿನ ಕಲರ್ ಭಾವಚಿತ್ರವನ್ನು ಅಂಟಿಸಬೇಕು. **ಸಂಸ್ಥೆಯ ಪ್ರಾಂಶುಪಾಲರು ಸಹಿ ಮತ್ತು ಮೊಹರನ್ನು ಹಾಕಬಾರದು** ಹಾಗೂ ಪಿನ್ ಅಥವಾ ಸ್ಟ್ಯಾಪಲ್ ಮಾಡಬಾರದು.

11) ಅಂಕಣ 11ರಲ್ಲಿ ವಿದ್ಯಾರ್ಥಿ ತನ್ನ ಸಹಿಯನ್ನು ಬಾಕ್ಸ್‌ನೊಳಗೆ ಮಾತ್ರ ಮಾಡಬೇಕು.

12) ಅಂಕಣ 12ರಲ್ಲಿ ಸಂಬಂಧಿಸಿದ ಗ್ರೇಡ್‌ಗೆ ಶೇಡ್ ಮಾಡುವುದು

| 12. Drawing Grade | |
|---|---|
| 1. Higher | ● |

13) ಅಂಕಣ 13ರಲ್ಲಿ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಶೇಡ್ ಮಾಡುವುದು.

| 13. Subject Code Higher Grade | |
|---|---|
| 1. H1 | ● |
| 2. H2 | ● |
| 3. H3 | ● |
| 4. H4 | ● |
| 5. H5 | ● |
| 6. H6 | ● |

14) ಅಂಕಣ 14ರಲ್ಲಿ ವಿದ್ಯಾರ್ಥಿಯ ಕಿವುಡ ಮತ್ತು ಮೂಗನಾಗಿದ್ದಲ್ಲಿ ಮಾತ್ರ ಶೇಡ್ ಮಾಡುವುದು.

| 14. Subject of Deaf & Dumb |
|---|
| H4A ○ |

15) ಅಂಕಣ 15ರಲ್ಲಿ ಯಾವ ವಿಧದ ಶಾಲೆ ಎಂಬುದನ್ನು ಶೇಡ್ ಮಾಡುವುದು.

ಉದಾ:- Unaided


| 15. Type of Institution (Shade the type) |
|---|
| 1. Government ○ |
| 2. Aided ○ |
| 3. Unaided ● |

16) ಅಭ್ಯರ್ಥಿಯ ತಂದೆಯ ಹೆಸರನ್ನು ಶಾಲಾ ದಾಖಲಾತಿಯಲ್ಲಿ ಇರುವಂತೆ ಬರೆದು ಶೇಡ್ ಮಾಡುವುದು.

**16. Father's Name (In CAPITAL LETTERS only as per School Records)**

VENKATESH J G

17) ಅಭ್ಯರ್ಥಿಯ ತಾಯಿಯ ಹೆಸರನ್ನು ಶಾಲಾ ದಾಖಲಾತಿಯಲ್ಲಿರುವಂತೆ ಬರೆದು ಶೇಡ್ ಮಾಡುವುದು.


17. Mother's Name (In CAPITAL LETTERS only as per School Records)

A N I T H A K A

18) ಅಂಕಣ 18ರಲ್ಲಿ ಬಾಕ್ಸ್‌ನಲ್ಲಿ ಸಂಸ್ಥೆಯ ಮುಖ್ಯಸ್ಥರು ಮೊಹರನ್ನು ಹಾಕಿ ಸಹಿಮಾಡುವುದು

ನಿರ್ದೇಶಕರು
(ಇತರೆ ಪರೀಕ್ಷೆಗಳು)

<u>ಒ.ಎಂ.ಆರ್.ಗಳನ್ನು ಮಂಡಳಿಗೆ ಕಳುಹಿಸಬೇಕಾದ ವಿಳಾಸ:-</u>

ಶ್ರೀಸಿ.ವಿ.ಕುಮಾರಸ್ವಾಮಿ,
ಸಹಾಯಕ ನಿರ್ದೇಶಕರು,
ಡ್ರಾಯಿಂಗ್ ಗ್ರೇಡ್ ವಿಭಾಗ,
4ನೇ ಮಹಡಿ,
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560003